# ಶಾಸ್ತ್ರೀಯ ನೃತ್ಯಶಾಲೆ ಆರಂಭಿಸಬೇಕಿದೆ



**ರಷ್ಮಿತಾ ಜೆ. ಶೆಟ್ಟಿ**
ಝೀ ಕನ್ನಡದ 'ಸುಬ್ಬುಲಕ್ಷ್ಮಿ ಸಂಸಾರ'ದ ಇಷಾ

★ *ಇಷಾ ಬಗ್ಗೆ ನಿಮಗೆ ಏನೆನಿಸುತ್ತದೆ?*

ಸುಬ್ಬುಲಕ್ಷ್ಮಿ ಸಂಸಾರಕ್ಕೆ ಹೊಸ ಪ್ರವೇಶ. ಆಕೆಯದು ನೆಗೆಟಿವ್ ಗುಣಗಳ ವ್ಯಕ್ತಿತ್ವ. ಕಥೆಯ ಮುಖ್ಯ ಭೂಮಿಕೆ ಒಂದು ಅಪಾರ್ಟ್‌ಮೆಂಟ್. ಇಷಾಳೇ ಅದರ ಮಾಲೀಕಳಾಗಿದ್ದಾಳೆ. ಸಹಜವಾಗಿ ಒಂದಿಷ್ಟು ಗತ್ತುಗಾರಿಕೆ ಆಕೆಯದು. ತುಂಬಾ ಕ್ರಿಮಿನಲ್ ಬುದ್ಧಿಯ ಆಕೆಗೆ ಹೇಗಾದರೂ ಸರಿ ಸುಬ್ಬುಲಕ್ಷ್ಮಿಗೆ ಕಿರಿಕಿರಿ ಕೊಡಬೇಕು ಎನ್ನುವ ವಿಘ್ನ ಸಂತೋಷ ಅವಳದು. ಸುಬ್ಬುಲಕ್ಷ್ಮಿ ಗಂಡನಿಗೆ ಶಮೆಯ ಜೊತೆ ಅನೈತಿಕ ಸಂಬಂಧ ಇದೆ. ಆಕೆಗೆ ಹೇಗಾದರೂ ಮಾಡಿ ಸುಬ್ಬುಲಕ್ಷ್ಮಿಯನ್ನು ಮಟ್ಟ ಹಾಕಬೇಕು ಎನ್ನುವ ಯೋಚನೆ. ಅದನ್ನೇ ಇಷಾ ಬಂಡವಾಳ ಮಾಡಿಕೊಳ್ಳುತ್ತಾಳೆ. ಹೊಸ ಹೊಸ ಕುತಂತ್ರಗಳನ್ನು ಹೇಳಿ ಕೊಡುತ್ತಾಳೆ. ಇಷಾಳ ಚಾಡಿ ಮಾತನ್ನು ಕೇಳುವ ಶಮೆಯಾ ಮತ್ತೆ ಮತ್ತೆ ತಪ್ಪಿನಲ್ಲಿ ಸಿಲುಕುತ್ತಾಳೆ. ತನ್ನ ದುಷ್ಟಬುದ್ಧಿಯಿಂದ ಮತ್ತಷ್ಟು ಹಾಳಾಗುತ್ತಾಳೆ.

★ *ಇಂತಹ ಪಾತ್ರದ ಬಗ್ಗೆ ನೀವೇನಾದರೂ ನಿಂದನೆಗೆ ಒಳಗಾಗಿದ್ದೀರಾ?*

ಸಾರ್ವಜನಿಕವಾಗಿ ಕೆಲವೊಂದು ಕಡೆ ಜನ ನನ್ನನ್ನು ಇಷಾ ಎಂದೇ ಗುರುತಿಸುತ್ತಾರೆ. ಮಾತ್ರವಲ್ಲದೇ ಅದೇ ರೀತಿ ನನ್ನನ್ನು ನೋಡುವುದೂ ಇದೆ. ಅಂತಹವರಿಗೆ ಪಾತ್ರವಾಗಿ ಮಾತ್ರ ನೋಡಬೇಕು. ಕಥೆಯೇ ಹಾಗಿದೆ ಎಂದು ತಿಳಿಹೇಳುತ್ತೇನೆ. ಇನ್ನೂ ಕೆಲವರು ಪ್ರಶಾಂತ ಮನೋಭಾವದ ನೀವು ಅಷ್ಟೊಂದು ಕ್ರೂರಿಯಾಗಿ ಏಕೆ ಕಾಣಿಸಿಕೊಳ್ಳುತ್ತೀರಿ? ಹೇಗೆ ಸಾಧ್ಯ? ಎಂದು ಪ್ರಶ್ನಿಸುತ್ತಾರೆ. ಇತ್ತೀಚೆಗಷ್ಟೇ ಅಭಿನಯ ಲೋಕವನ್ನು ಪ್ರವೇಶಿಸಿದ ನನಗೆ ಇದು ಎರಡನೇ ಧಾರಾವಾಹಿ. ಇಂತಹ ಪಾತ್ರ ನನಗೆ ಬೇಕಿತ್ತು.

★ *ನಟನೆಯನ್ನು ಆರಂಭಿಸಿದ್ದು ಹೇಗೆ?*

ನಮ್ಮೂರು ಚಿಕ್ಕಮಗಳೂರು. ನಾನು ಕ್ಲಾಸಿಕಲ್ ಡಾನ್ಸರ್. ಭರತನಾಟ್ಯ, ಕುಚಿಪುಡಿ, ಮೋಹಿನಿ ಅಟ್ಟಂ ನೃತ್ಯ ಮಾಡುತ್ತೇನೆ. ರಾಷ್ಟ್ರೀಯ ಮಟ್ಟದ ನೃತ್ಯ ಸ್ಪರ್ಧೆಯಲ್ಲೂ ಭಾಗಿಯಾಗಿದ್ದೇನೆ. ಕರಾಟೆ, ಜೂಡೊ ಕ್ರೀಡೆಯನ್ನೂ ಅಭ್ಯಾಸ ಮಾಡಿದ್ದೇನೆ. ಕರ್ನಾಟಕವನ್ನು ಪ್ರತಿನಿಧಿಸಿ ರಾಷ್ಟ್ರೀಯ ಮಟ್ಟದಲ್ಲಿ ಎರಡು ಬಾರಿ ಕಂಚಿನ ಪದಕ ಪಡೆದಿದ್ದೇನೆ. ಬಿಸಿಎ ಮಾಡಿದ ನಂತರ ಎಂಸಿಎ ಓದಬೇಕಿತ್ತು. ಓದುವುದಕ್ಕಿಂತ ಸೃಜನಶೀಲವಾಗಿ ಏನಾದರೂ ಮಾಡಬೇಕು ಎನ್ನುವ ಯೋಚನೆ ನನ್ನಲ್ಲಿ ಆಗಲೇ ಮೊಳಕೆಯೊಡೆದಿತ್ತು. ನನ್ನ ತಾಯಿ (ಲೀಲಾ) ಅಭಿನಯದ ಅಭಿಲಾಷೆಯನ್ನು ಮೂಡಿಸಿದರು. ಆಗಲೇ ಆಡಿಷನ್ ಕೊಡಲು ಆರಂಭಿಸಿದೆ. 'ಕಾಲಭೈರವ' ಎನ್ನುವ ಧಾರಾವಾಹಿಗೆ ನಾನು ಆಯ್ಕೆಯಾದೆ. ಧಾರಾವಾಹಿ ಏಕೋ ವಿಳಂಬವಾಯಿತು. ಅದೇ ಸಮಯಕ್ಕೆ 'ತ್ರಿವೇಣಿ ಸಂಗಮ'ದಲ್ಲಿ ನಟಿಸಿದೆ. ಈಗ 'ಬ್ರಹ್ಮಾಸ್ತ್ರ' ಧಾರಾವಾಹಿಯಲ್ಲೂ ನಟಿಸುತ್ತಿದ್ದೇನೆ. ಇದರ ನಡುವೆ 'ಕೃಷ್ಣಾ ಗಾರ್ಮೆಂಟ್' ಸಿನಿಮಾದಲ್ಲಿಯೂ ನಟಿಸಿದ್ದೇನೆ. ನಾನು ಅಭಿನಯವನ್ನು ಆರಂಭಿಸಿ ಆರು ತಿಂಗಳಲ್ಲಿ ಬಿಡುವು ಇಲ್ಲದಂತೆ ತೊಡಗಿದ್ದೇನೆ.

★ *ಪೂರ್ಣಾವಧಿ ನಟಿಯಾಗುವ ಅಪೇಕ್ಷೆ ಇದೆಯಾ?*

ಹೀಗೆ ಪೂರ್ಣಾವಧಿ ಕೆಲಸಗಳು ಇರುತ್ತವೆ ಎನ್ನಲು ಆಗುವುದಿಲ್ಲ. ದೊಡ್ಡ ದೊಡ್ಡ ನಟರಿಗೇ ವರ್ಷದಲ್ಲಿ ಕೆಲವು ತಿಂಗಳು ಕೆಲಸ ಇಲ್ಲದಂತೆ ಆಗುತ್ತದೆ. ಹೀಗಿರುವಾಗ ಇದನ್ನೇ ಪೂರ್ಣಾವಧಿ ವೃತ್ತಿಯನ್ನಾಗಿ ಮಾಡಿಕೊಳ್ಳುವ ಬದಲು ಶಾಸ್ತ್ರೀಯ ಸಂಗೀತ ಶಾಲೆಯನ್ನು ಆರಂಭಿಸಬೇಕು ಎಂದುಕೊಂಡಿದ್ದೇನೆ. ಬೆಂಗಳೂರಿಗೆ ಈಗಷ್ಟೆ ಬಂದಿದ್ದೇನೆ. ಇಲ್ಲೇ ಮಕ್ಕಳಿಗೆ ನೃತ್ಯ ಹೇಳಿಕೊಡುವ ಮೂಲಕ ಅಭಿನಯವನ್ನು ಮುಂದುವರಿಸುತ್ತೇನೆ.

★ *ನಿಮ್ಮ ಬಗ್ಗೆ ನೀವು ಹೇಳುವುದಾರೆ..*

ನನ್ನ ತಂದೆ ಜಗನ್ನಾಥ್. ಒಂದನೇ ತರಗತಿಯಲ್ಲಿ ಓದುತ್ತಿದ್ದಾಗ ರಸ್ತೆ ಅಪಘಾತದಲ್ಲಿ ನಿಧನ ಹೊಂದಿದರು. ಆಗಿನಿಂದ ಈವರೆಗೂ ನನ್ನ ಅಮ್ಮನೇ ನನ್ನನ್ನು ಸಾಕಿದ್ದಾರೆ. ಅವರು ಚಿಕ್ಕ ಕ್ಯಾಂಟೀನ್ ನಡೆಸುತ್ತಿದ್ದರು. ನನಗೆ ಅಮ್ಮನೇ ಸರ್ವಸ್ವ. ಆಕೆಗೆ ಏನು ಅನಿಸಿತ್ತೋ ಗೊತ್ತಿಲ್ಲ. ನಾನು 2ನೇ ತರಗತಿ ಓದುತ್ತಿದ್ದಾಗಲೇ ಭರತನಾಟ್ಯ ಕಲಿಯಲು ಸೇರಿಸಿದರು. ಜೂಡೊ ಕಲಿಕೆಗೂ ಕೂಡ ನನ್ನ ಅಮ್ಮನ ಒತ್ತಾಸೆಯ ಮೇರೆಗೆ ಸೇರಿದೆ. ಆ ವಯಸ್ಸಿನಲ್ಲಿ ನನಗೆ ಏನೂ ಗೊತ್ತಿರಲಿಲ್ಲ. ಆಕೆ ತನ್ನ ಆಶೆಯಂತೆಯೇ ನನ್ನನ್ನು ಬೆಳೆಸಿದರು. ಈಗಲೂ ಅಭಿನಯ ಅವರ ಆಶೆಯಂತೆ ಸಾಗುತ್ತಿದೆ. ಜನಮನ್ನಣೆ ಗಳಿಸಬೇಕು ಎನ್ನುವ ಅಭಿಲಾಷೆ ಇದ್ದ ನನಗೂ ಇದು ಒಳ್ಳೆಯ ಮಾರ್ಗ ಎಂದೆನಿಸಿದೆ. ಈವರೆಗಿನ ಮೂರು ಧಾರಾವಾಹಿಗಳಲ್ಲಿ ಆರಂಭದ ಕೆಲ ದಿನ ಅಮ್ಮನೇ ನನ್ನನ್ನು ಚಿತ್ರೀಕರಣದ ಮನೆಗೆ ಕರೆದುಕೊಂಡು ಹೋಗುತ್ತಿದ್ದರು. ಸಿನಿಮಾದಲ್ಲಿ ಚಿತ್ರ ಮುಗಿಯುವ ತನಕ ನನ್ನ ಜೊತೆಗೆ ಇದ್ದರು. ತುಂಬ ಕಷ್ಟಪಟ್ಟಿರುವ ಅವರಿಗೆ ದುಡಿಮೆಯ ಕೆಲಸ ಬಿಡಿಸಬೇಕು. ನನ್ನ ಜೊತೆ ಇರುವ ಕೆಲಸವನ್ನು ಕೊಡಬೇಕು ಎಂದು ಯೋಚಿಸಿದ್ದೇನೆ.

■ **ರಾಘವೇಂದ್ರ**